ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,
ಸೆಕ್ಟರ್ ನಂ–06, ನವನಗರ, ಬಾಗಲಕೋಟೆ–03
Tel:08354-297330

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, HESCOM, Sector No-06,
Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ:ಬಿಜಿಕೆ/ಅಅ(ವಿ)/ಉಲೆಸಿ/ಸಲೆ/ಹಿಸ–1/22–23/ 9196-9200 ದಿನಾಂಕ: 30 NOV 2022

ದಿನಾಂಕ: 16.11.2022 ರಂದು ಮಧ್ಯಾಹ್ನ 4.00 ಘಂಟೆಗೆ ಶ್ರೀ ಕಾಶೀನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭಯ ನಡಾವಳಿಗಳು.

ಹಾಜರಿದ್ದವರು:
1) ಶ್ರೀ. ಸಿ ವ್ಹಿ ಶಿವಪೂಜಿ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟ.
2) ಶ್ರೀ. ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.
3) ಶ್ರೀ. ಅರವಿಂದ ನಾಯಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ನಗರ ಉಪ–ವಿಭಾಗ ಹೆಸ್ಕಾಂ, ಬಾಗಲಕೋಟೆ.
4) ಶ್ರೀ. ಬದರಿನಾಥ ಸುರೇಬಾನ ರವರ ಪ್ರತಿನಿಧಿ ಶ್ರೀ. ರಂಗನಾಥ ಮ ಪಾಡಮುಖೆ, ಸೆಕ್ಟರ್ ನಂ:03, ನಿವೇಶನ ಸಂಖ್ಯೆ:78 ನವನಗರ ಬಾಗಲಕೋಟೆ.

<u>ಪ್ರಕರಣ ಸಂಖ್ಯೆ:08/2022</u>

ಶ್ರೀ. ಬದರಿನಾಥ ಸುರೇಬಾನ
ಪ್ರತಿನಿಧಿ: ಶ್ರೀ. ರಂಗನಾಥ ಮ. ಪಾಡಮುಖೆ ------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ನಗರ ಉಪ–ವಿಭಾಗ
ಹುವಿಸಕಂನಿ., ಬಾಗಲಕೋಟೆ ------- ಪ್ರತಿವಾದಿ

**ವಿಷಯ: "ನಿಗದಿತ ಕಾಲಾವಧಿಯಲ್ಲಿ ವಿದ್ಯುತ್ ಸಂಪರ್ಕ ನೀಡದಿರುವ ಕುರಿತು ವಿಳಂಬವಾಗಿ ವಿದ್ಯುತ್ ಸಂಪರ್ಕ ನೀಡಿರುತ್ತಾರೆ" ಕುರಿತು.**

*&*&*

ಪ್ರಕರಣ ಸಂಖ್ಯೆ:08/2022 ರಕ್ಕೆ ಸಂಬಂಧಿಸಿದಂತೆ, ದಿನಾಂಕ:16–11–2022 ರಂದು ಮಧ್ಯಾಹ್ನ 4.00 ಘಂಟೆಗೆ ಶ್ರೀ ಕಾಶಿನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ಬದರಿನಾಥ ಸುರೇಬಾನ ರವರ ಪ್ರತಿನಿಧಿ ಶ್ರೀ. ರಂಗನಾಥ ಮ ಪಾಡಮುಖೆ, ಸೆಕ್ಟರ್ ನಂ:03, ನಿವೇಶನ ಸಂಖ್ಯೆ:78 ನವನಗರ ಬಾಗಲಕೋಟೆ ರವರ ದಿನಾಂಕ:16-11-2022 ರ ಸಭೆಯಲ್ಲಿನ ಹೇಳಿಕೆ :

ನಿಗದಿತ ಕಾಲಾವಧಿಯಲ್ಲಿ ವಿದ್ಯುತ್ ಸಂಪರ್ಕ ನೀಡದೇ ವಿಳಂವಾಗಿ ವಿದ್ಯುತ್ ಸಂಪರ್ಕ ನೀಡಿದ್ದು, ಕವಿ.ನಿ.ಅ ದ ನಿಯಮಾವಳಿಯಂತೆ ಹಾಗೂ ನಾನು ಅನುಭವಿಸಿದ ಕಷ್ಟ ನಷ್ಟ ಮತ್ತು ಇತರೇ ವೆಚ್ಚಗಳಿಗೆ ಸೂಕ್ತ ಪರಿಹಾರ ನೀಡುವಂತೆ ಹಾಗೂ ದಿನಾಂಕ:26-01-2022 ರಂದು ನಿವೇಶನಕ್ಕೆ ವಿದ್ಯುತ್ ಸಂಪರ್ಕ ಕೋರಿ ಹೆಸ್ಕಾಂ ಇಲಾಖೆಯ ಜಾಲತಾಣದಲ್ಲಿ ಅರ್ಜಿಯನ್ನು ನೊಂದಾಯಿಸಿದ್ದು, ನೊಂದಾಯಿಸಿದ 30 ದಿನಗಳೊಳಗಾಗಿ ವಿದ್ಯುತ್ ಸಂಪರ್ಕ ನೀಡಿರುವದಿಲ್ಲ ಎಂದು ತಿಳಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)ಕಾರ್ಯ ಮತ್ತು ಪಾಲನಾ ನಗರ ಉಪ-ವಿಭಾಗ ಹುವಿಸಕಂನಿ., ಬಾಗಲಕೋಟೆ ರವರ ದಿನಾಂಕ:16-11-2022 ರ ಸಭೆಯಲ್ಲಿನ ಲಿಖಿತ ಹೇಳಿಕೆ :

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)ಕಾರ್ಯ ಮತ್ತು ಪಾಲನಾ ನಗರ ಉಪ-ವಿಭಾಗ ಹುವಿಸಕಂನಿ., ಬಾಗಲಕೋಟೆ ರವರ ಪತ್ರ ಸಂಖ್ಯೆ:ಬಿಜಿಕೆ/ನಗರ/ಸಕಾನಿಅ(ವಿ)/ತಾಸ/ಎಫ್-3/2022-23/4654 ದಿನಾಂಕ:15-11-2022 ರ ಪತ್ರದ ಪ್ರಕಾರ ದಿನಾಂಕ:26-01-2022 ರಂದು ಶ್ರೀ. ಬದರಿನಾಥ ಸುರೇಬಾನ ರವರು ತಮ್ಮ ಪ್ಲಾಟ್ ಸಂಖ್ಯೆ:26 ಎ ಸೆಕ್ಟರ್ ಸಂಖ್ಯೆ:66 ನವನಗರ ಬಾಗಲಕೋಟೆಯಲ್ಲಿರುವ ನಿವೇಶನಕ್ಕೆ ವಿದ್ಯುತ್ ಸಂಪರ್ಕ ಕೋರಿ ಹೆಸ್ಕಾಂ ಇಲಾಖೆಯ ಜಾಲತಾಣದಲ್ಲಿ ಅರ್ಜಿಯನ್ನು ನೊಂದಾಯಿಸಿರುತ್ತಾರೆ.

ಮಾನ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ) ಹೆಸ್ಕಾಂ ನವನಗರ ಹುಬ್ಬಳ್ಳಿ ರವರ ಪತ್ರದನ್ವಯ ಯುನಿಟ್-2 ರಲ್ಲಿ ಬರುವ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ನೀಡಲು ತಿಳಿಸಿರುವ ಆದೇಶದಂತೆ ಯಾವ ಯಾವ ಎಲ್.ಟಿ ಫೀಡರ್ ಪಿಲ್ಲರ್ ಬಾಕ್ಸ್ ಗಳಲ್ಲಿ ವಿದ್ಯುತ್ ಸಂಪರ್ಕ ಇರುವುದನ್ನು ಖಚಿತಪಡಿಸಿಕೊಂಡು ಶಾಶ್ವತ ವಿದ್ಯುತ್ ಸಂಪರ್ಕವನ್ನು ನೀಡಲಾಗಿರುತ್ತದೆ. ಆದರೆ ಸದರೀ ಗ್ರಾಹಕರ ಸ್ಥಳ ಪರಿಶೀಲಿಸಿದ ಸಮಯದಲ್ಲಿ ಫೀಡರ್ ಪಿಲ್ಲರ್ ಬಾಕ್ಸ್‌ನಲ್ಲಿ ವಿದ್ಯುತ್ ಸಂಪರ್ಕ ಇಲ್ಲದಿರುವರಿಂದ ಸದರೀ ಎಲ್.ಟಿ ವಿದ್ಯುತ್ ಮಾರ್ಗವನ್ನು ಸರಿಪಡಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿ.ಟಿ.ಡಿ.ಎ ಉಪ ವಿಭಾಗ-5 ಬಾಗಲಕೋಟೆ ರವರಿಗೆ ತಿಳಿಸಿದರೂ ಸಹ ವಿದ್ಯುತ್ ಮಾರ್ಗವನ್ನು ಸರಿಪಡಿಸಿರುವದಿಲ್ಲ. ಅದರಂತೆ, ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ ಬಾಗಲಕೋಟೆ ರವರ ಪತ್ರದನ್ವಯ ತಾತ್ಕಾಲಿಕವಾಗಿ ಪ್ರಸ್ತುತವಿರುವ ಓವರ್ ಹೇಡ್ ಲೈನ್ ಮುಖಾಂತರ ವಿದ್ಯುತ್ ಸಂಪರ್ಕ ನೀಡಲು ತಿಳಿಸಿರುವಂತೆ, ಗ್ರಾಹಕರು ಭದ್ರತಾ ಠೇವಣಿ ಭರಣಾ ಮಾಡಿದ 30 ದಿನಗಳಲ್ಲಿ ವಿದ್ಯುತ್ ಸಂಪರ್ಕ ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

## ಆ ದೇ ಶ

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2022-23/ ದಿನಾಂಕ:

ಗ್ರಾಹಕರು ದಿನಾಂಕ:19-08-2022 ರಂದು ಭದ್ರತಾ ಠೇವಣಿ ಭರಣಾ ಮಾಡಿದ್ದು, ತದನಂತರ ಸದರೀ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ನೀಡಲಾಗಿದ್ದು, ಆದ್ದರಿಂದ ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟೆ.

ಶ್ರೀ ನಾರಾಯಣ ಕಳ್ಳಿಮನಿ
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟೆ.

ಅಧ್ಯಕ್ಷರು,
(ಕಾಶೀನಾಥ.ಜಿ ಹಿರೇಮಠ,) 24\11
ಅಧೀಕ್ಷಕ ಅಭಿಯಂತರರು(ವಿ) ಬಾಗಲಕೋಟೆ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟೆ

ಪ್ರತಿಯನ್ನು:

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ನಗರ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
5) ಶ್ರೀ. ಬದರಿನಾಥ ಸುರೇಬಾನ ರವರ ಪ್ರತಿನಿಧಿ ಶ್ರೀ. ರಂಗನಾಥ ಮ ಪಾಡಮುಖಿ, ಸೆಕ್ಟರ್ ನಂ:03, ನಿವೇಶನ ಸಂಖ್ಯೆ:78 ನವನಗರ ಬಾಗಲಕೋಟೆ. ಮೋ.ಸಂ:9448646741.

ಕಛೇರಿ ಪ್ರತಿ/ಪ್ರಧಾನ ಕಡತ.